# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೊಂಬತ್ತನೆಯ ಅಧಿವೇಶನ**

**ಲಘು ಪ್ರಕಟಣೆ ಭಾಗ – 2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಕ್ರಮ ಸಂಖ್ಯೆ : 26**

**ಸೋಮವಾರ, ದಿನಾಂಕ: 30ನೇ ಸೆಪ್ಟೆಂಬರ್, 2019**

## ವಿಧಾನ ಪರಿಷತ್ತಿನ ಉಪವೇಶನಗಳು

ಕರ್ನಾಟಕ ವಿಧಾನ ಪರಿಷತ್ತಿನ **ನೂರ ಮೂವತ್ತೊಂಬತ್ತನೆಯ ಅಧಿವೇಶನದ ಉಪವೇಶನಗಳು ದಿನಾಂಕ: 10.10.2019ರಂದು ಬೆಳಗ್ಗೆ:11.00** ಗಂಟೆಗೆ ಬೆಂಗಳೂರಿನ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ **ಸಭಾಂಗಣದಲ್ಲಿ ಸಭೆ ಸೇರಲಿದೆ.**

ವಿಧಾನ ಪರಿಷತ್ತಿನ **ನೂರ ಮೂವತ್ತೊಂಬತ್ತನೆಯ ಅಧಿವೇಶನದ** ಉಪವೇಶನಗಳ ಕಾರ್ಯಕಲಾಪಗಳನ್ನು ವ್ಯವಹರಿಸಲು ಈ ಕೆಳಕಂಡಂತೆ ದಿನಾಂಕಗಳನ್ನು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ :–

### ದಿನಾಂಕ: 10, 11 ಹಾಗೂ 12ನೇ ಅಕ್ಟೋಬರ್, 2019.

ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಉಪವೇಶನದ ವೇಳೆಯನ್ನು ಅನ್ಯಥಾ ಅಧಿಸೂಚಿಸದ ಹೊರತು ಸದನದ ಉಪವೇಶನವು ಬೆಳಗ್ಗೆ **10–30** ಗಂಟೆಯಿಂದ **2–00** ಗಂಟೆಯವರೆಗೆ ಮತ್ತು ಮಧ್ಯಾಹ್ನ **3.00** ಗಂಟೆಯಿಂದ ಸಂಜೆ **6.00** ಗಂಟೆಯವರೆಗೆ ಸಮಾವೇಶಗೊಳ್ಳುತ್ತದೆ.

### 1. ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲಿನ ಚರ್ಚೆ
### (ನಿಯಮ 68)

ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರು ವಿಷಯವನ್ನು ಲಿಖಿತ ಸೂಚನೆಯನ್ನು ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು.

## 2. ಗಮನ ಸೆಳೆಯುವ ಸೂಚನೆ
## (ನಿಯಮ 72)

ಸದಸ್ಯರು ಸಭಾಪತಿಯವರ ಪೂರ್ವಭಾವಿ ಅನುಮತಿಯೊಂದಿಗೆ ಸಾರ್ವಜನಿಕ ಮಹತ್ವದ ಯಾವುದೇ ಜರೂರು ವಿಷಯದ ಬಗ್ಗೆ ಮಂತ್ರಿಗಳ ಗಮನ ಸೆಳೆಯಬಹುದು ಹಾಗೂ ಮಂತ್ರಿಗಳು ಸದನದಲ್ಲಿ ಆ ಬಗ್ಗೆ ಸಂಕ್ಷಿಪ್ತವಾದ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಆ ಕಾಲಕ್ಕೆ ಚರ್ಚೆ ಇರುವುದಿಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಐದು ಸದಸ್ಯರಿಗಿಂತ ಹೆಚ್ಚಿಲ್ಲದಂತೆ ವಿಷಯಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ಸದಸ್ಯರು ಕಾರ್ಯಕಲಾಪಗಳ ಪಟ್ಟಿಯ ಮೇರೆಗೆ ಸಭಾಪತಿಯವರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಯಾವುದೇ ಸದಸ್ಯರು ಒಂದು ಉಪವೇಶನದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಬಾರಿ ಸೂಚನೆಗಳನ್ನು ನೀಡತಕ್ಕದ್ದಲ್ಲ.

## 3. ಅರ್ಜಿಗಳು
## (ನಿಯಮ 133 ರಿಂದ 141ರವರೆಗೆ)

ಸಾರ್ವಜನಿಕ ಮಹತ್ವವುಳ್ಳ ವಿಷಯಗಳ ಬಗ್ಗೆ  ಸದನಕ್ಕೆ ಆ ನಿಯಮಗಳಲ್ಲಿ ನಮೂದಿಸಿದ ವಿಧಾನವನ್ನು ಪಾಲಿಸುವ ಮೂಲಕ ಸದಸ್ಯರುಗಳು ಅರ್ಜಿಗಳನ್ನು ವಿಧಾನ ಪರಿಷತ್ತಿಗೆ ಸಲ್ಲಿಸಬಹುದಾಗಿದೆ.

## 4. ನಿಯಮ 330ರ ಮೇರೆಗೆ ಸೂಚನೆ

ಒಂದು ಕ್ರಿಯಾಲೋಪವಲ್ಲದಂತಹ ಯಾವ ವಿಷಯವನ್ನಾಗಲಿ ಸದನದ ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ನಿಗದಿಪಡಿಸಿದ ನಮೂನೆಯಲ್ಲಿ ವಿಷಯವನ್ನು ಕಾರಣಗಳ ಸಹಿತ ಸಂಕ್ಷಿಪ್ತವಾಗಿ ವಿವರಿಸಿ, ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ ಸೂಚನಾ ಪತ್ರವನ್ನು ಕೊಡಬೇಕು. ಸಭಾಪತಿಯವರು ಅನುಮತಿ ನೀಡಿದ ನಂತರವೇ ಸದಸ್ಯರು ವಿಷಯವನ್ನು ಪ್ರಸ್ತಾಪಿಸಲು ಅನುಮತಿ ದೊರೆತಂತಾಗುವುದು ಮತ್ತು ಆ ಸದಸ್ಯರು ಸಭಾಪತಿಯವರು ಗೊತ್ತುಪಡಿಸಬಹುದಾದ ಸಮಯ ಮತ್ತು ದಿನದಲ್ಲಿ ಮಾತ್ರ ಆ ವಿಷಯವನ್ನು ಪ್ರಸ್ತಾಪಿಸಬಹುದು.

## 5. ವಿಶೇಷ ಪ್ರಸ್ತಾವಗಳು
## ( ನಿಯಮ 330ಎ ಮೇರೆಗೆ )

ಪ್ರಶ್ನೋತ್ತರದ ವೇಳೆ ಇಲ್ಲದ ದಿನದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಗುವ ಮುಂಚೆ ಯಾರೇ ಸದಸ್ಯರು ಇತ್ತೀಚಿನ ವಿಷಯಗಳನ್ನೊಳಗೊಂಡ ಎರಡು ನೂರು ಪದಗಳಿಗೆ ಮೀರದಂತೆ ಸಭಾಪತಿಗಳ ಅನುಮತಿಯ ಮೇರೆಗೆ ವಿಶೇಷ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಬಹುದು. ಸರ್ಕಾರವು ಆ ಪ್ರಸ್ತಾವಕ್ಕೆ ಮೂರು ದಿನಗಳ ಒಳಗೆ ಉತ್ತರವನ್ನು ಸದನಕ್ಕೆ ನೀಡತಕ್ಕದ್ದು.

...3

ಒಂದು ದಿನಕ್ಕೆ ಮೂರಕ್ಕಿಂತ ಹೆಚ್ಚು ಇಲ್ಲದಂತೆ ಪ್ರಸ್ತಾವಗಳನ್ನು ಚರ್ಚಿಸಲು ಸಭಾಪತಿಯವರು ಅನುಮತಿಸತಕ್ಕದ್ದು.

ಅನುಬಂಧ 1ರಲ್ಲಿ ತಿಳಿಸಿದ ಸೂಚನೆಗಳನ್ನು ಪಾಲಿಸದೆ ಅಪೂರ್ಣಗೊಳಿಸಿದ ಸೂಚನಾ ಪತ್ರಗಳನ್ನು ನೀಡಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

**ಸ್ಥಳ: ಬೆಂಗಳೂರು,**
**ದಿನಾಂಕ: 30ನೇ ಸೆಪ್ಟೆಂಬರ್, 2019.**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

**ವಿಶೇಷ ಸೂಚನೆ**

ಸದಸ್ಯರುಗಳು ಸೂಚನೆಗಳನ್ನು **Email ID: KLC@Karnataka. gov.in** ಮುಖಾಂತರವೂ ನಿಗದಿತ ಅವಧಿಯೊಳಗೆ ಕಳುಹಿಸಬಹುದಾಗಿದೆ.

ಭಾನುವಾರ ಮತ್ತು ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ, ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಸೂಚನೆಗಳನ್ನು ಪ್ರಶ್ನೆಗಳ ಶಾಖೆಯಲ್ಲಿ ಸ್ವೀಕರಿಸಲಾಗುವುದು ಹಾಗೂ ಪ್ರತಿದಿನ ಕೊಠಡಿ ಸಂಖ್ಯೆ: 103, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು ಇದರ ಮುಂದೆ ಇಟ್ಟಿರುವ ಮರದ ಪೆಟ್ಟಿಗೆಯಲ್ಲಿ ಹಾಕಲಾಗಿರುವ ಸೂಚನೆಗಳನ್ನು ಪರಿಗಣಿಸಲಾಗುವುದು.

..4

**ಅನುಬಂಧ – 1**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳ ಮಾಹಿತಿಗಾಗಿ :–**

ಈ ಕೆಳಗೆ ನಮೂದಿಸಲಾಗಿರುವ ಸೂಚನೆಗಳನ್ನು ಪಾಲಿಸದೆ ಅಪೂರ್ಣಗೊಳಿಸಿದ ಗಮನ ಸೆಳೆಯುವ/ನಿಯಮ 330ರ ಸೂಚನೆಗಳನ್ನು ಪರಿಗಣಿಸಲಾಗುವುದಿಲ್ಲ.

1) ಸೂಚನೆಯಲ್ಲಿ ಸಹಿ ಮಾಡದಿರುವುದು.
2) ಸಂಕ್ಷಿಪ್ತ ವಿಷಯ ಬರೆಯದಿರುವುದು.
3) ಸೂಚನಾ ಪತ್ರದ ದಿನಾಂಕ ನಮೂದಿಸದಿರುವುದು.
4) ಸೂಚನೆಯನ್ನು ಓದಲು ಸ್ಪಷ್ಟವಾಗಿ ಅರ್ಥವಾಗುವಂತೆ ಬರೆಯದಿರುವುದು.
5) ಸೂಚನೆಯನ್ನು ಬೆರಳಚ್ಚು ಮಾಡಿ ಸಲ್ಲಿಸದಿರುವುದು.
6) ಹೆಚ್ಚುವರಿ ಸೂಚನೆಗಳನ್ನು ನೀಡಿದ ಕಾರಣ ಹಿಂತಿರುಗಿಸಿರುವುದು.
7) ವಿಷಯವು ಸ್ಪಷ್ಟವಾಗಿಲ್ಲದಿರುವುದು.
8) ಮತಕ್ಷೇತ್ರ ನಮೂದಿಸದಿರುವುದು.

---

ವಿಧಾನ ಪರಿಷತ್ತಿನ ಎಲ್ಲಾ ಮಾಹಿತಿಗಳು ಕೆಳಕಂಡ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ.

**www.klc.kar.nic.in/council.htm**